ಈ - ದಿವಸ ಸುದ್ದಿಪತ್ರಿಕೆ
2/9/2018

# ಹೊಟ್ಟೆ ಹರಿದು ಹೊರಗೆ ಬಾ ವಾತಾಪಿ..!



– ಸುಷ್ಮಾ ಪವಾರ, ವಿಜಯಪುರ

**ಬಾ**ದಾಮಿ ಎಂದಾಕ್ಷಣ ನೆನಪಾಗುವುದು ಸಹಸ್ರಾರು ವರ್ಷಗಳ ಹಿಂದೆಯೇ ನಿಸರ್ಗದಲ್ಲಿ ಬಿಡಿಸಿದ ಮೋಹಕ 'ಮೇಣ ಬಸದಿ' ಇಂದು ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ತಾಲೂಕ ಸ್ಥಳವಾಗಿದೆ. 6ನೇ ಶತಮಾನದ ಮಧ್ಯೆ ಭಾಗದಲ್ಲಿ ಚಾಲುಕ್ಯ ಅರಸ ಮೊದಲನೇಯ ಪುಲಕೇಶಿಯು ಬಾದಾಮಿಯನ್ನು ತನ್ನ ರಾಜಧಾನಿ ಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುವ ಮೊದಲೇ ಸುಪ್ರಸಿದ್ಧ ವಾಣಿಜ್ಯ ನಗರವಾಗಿತ್ತು.

ಗ್ರೀಕ್ ದೇಶದ ಭೂಗೋಳ ತಜ್ಞ ಟೊಲೆಮಿ ಕ್ರಿ.ಶ. ಸುಮಾರು 2ನೇಯ ಶತಮಾನದಲ್ಲಿ ತನ್ನ ಪುಸ್ತಕ ದಲ್ಲಿ ಬಾದಾಮಿಯನ್ನು 'ಬದೊಮೊಯಿ' ಎಂದು ಉಲ್ಲೇಖಿಸಿದ್ದಾನೆ. ವಾತಾಪಿ ಬಾದಾಮಿಯ ಪ್ರಾಚೀನ ಹೆಸರು. ಹಾಗೆ ಚಾಲುಕ್ಯರ ರಾಜಧಾನಿ ಎಂದು ಉಲ್ಲೇಖಿಸಿದ್ದಾನೆ. ವಾತಾಪಿಪುರ ಎಂದು ಹೆಸರು ಬರಲು ಒಂದು ದಂತಕಥೆ ಈ ರೀತಿಯಾಗಿದೆ.

ಒಂದಾನೊಂದು ಕಾಲದಲ್ಲಿ ವಾತಾಪಿ ಮತ್ತು ಇಲ್ವಲ ಎಂಬ ಇಬ್ಬರು ರಾಕ್ಷಸ ಸಹೋದರರಿದ್ದರು. ಅವರಿಬ್ಬರೂ ಅಹಾರದ ಹುಡುಕಾಟಕ್ಕೆ ಹೋಗುತ್ತಿರಲಿಲ್ಲ. ತಮ್ಮ ಮನೆ ಬಾಗಿಲಿಗೆ ಬಲಿಯನ್ನು ಕರೆ ತರುವ ಅಸಾಧಾರಣ ತಂತ್ರ ಅವರಲ್ಲಿತ್ತು. ಇಲ್ವಲ್ಲ ಅಥಿತಿಯೊಬ್ಬರನ್ನು ಕರೆತಂದು ಅವರಿಗೆ ವಾತಾಪಿಯ ದೇಹದಿಂದ ತಯಾರಿಸಿದ ಅಡುಗೆ ಮಾಡಿ ಬಡಿಸುತಿದ್ದ. ಅತಿಥಿ ಉಂಡ ಬಳಿಕ ಇಲ್ವಲ್ಲಾ 'ವಾತಾಪೀ ಹೊರಗೆ ಬಾ' ಎಂದು ಜೋರಾಗಿ ಕೂಗು ಹಾಕುತ್ತಿದ್ದ. ತಕ್ಷಣ ವಾತಾಪೀ ಆ ಅಥಿತಿ ಹೊಟ್ಟೆ ಬಗೆದು ಹೊರಬರುತ್ತಿದ್ದ. ಸತ್ತು ಬಿದ್ದ ಆ ಆತಿಥಿಯನ್ನು ಇಬ್ಬರು ಸೇರಿ ತಿಂದು ಹೊಟೆ ತುಂಬಿಸಿಕೊಳ್ಳುತ್ತಿದ್ದರು. ಅವರ ದಿನಚರಿ ಹೀಗಿರುವಾಗ ಒಮ್ಮೆ ಅಗಸ್ತ್ಯಮುನಿ ಅತಿಥಿಯಾಗಿ ಬಂದರು.

ಅಗಸ್ತ್ಯರು ತಮ್ಮ ಊಟವಾದ ತಕ್ಷಣ 'ವಾತಾಪೀ ಜೀರ್ಣೋಭವ' ಎಂದು ಹೇಳಿ ಜೋರಾಗಿ ತೇಗಿದರು. ಆ ಮೂಲಕ ವಾತಾಪಿ ತನ್ನ ಅಣ್ಣನಿಂದಲೇ ಸಾವಿಗೀಡಾದ. ಅವರಿಬ್ಬರು ಇದ್ದ ಊರಿಗೆ 'ವಾತಾಪೀ' ಬಾದಾಮಿ ಎಂಬ ಹೆಸರು ಬಂತು. ಬಾದಾಮಿಯ ಬೆಟ್ಟದ ಕೆಳಗೆ ಇರುವ ವಿಶಾಲವಾದ ಜಲಾಶಯಕ್ಕೆ ಇಂದಿಗೂ ಅಗಸ್ತ್ಯ ತೀರ್ಥ ಮಹಾ ಸರೋವರವೆಂದು ಕರೆಯಲಾಗಿದೆ.

ಚಾಲುಕ್ಯ ಪೂರ್ವ ಬಾದಾಮಿ ಹಿಂದಿನ ಕಾಲದಿಂದಲೂ ಮಲಪ್ರಭಾ ನದಿಯ ಬಯಲು ಸಂಸ್ಕೃತಿಯ ತೊಟ್ಟಿಲಾಗಿದೆ. ಬಾದಾಮಿಯ ಸಾಬರ ಪಡಿಯ ಹತ್ತಿರ ಹಳೆ ಶಿಲಾಯುಗದ ಕೈಕೊಡಲಿ, ಮಚ್ಚುಗಳು ದೊರೆತಿವೆ. ಮತ್ತು ದಕ್ಷಿಣ ಭಾಗದಲ್ಲಿರುವ ರಂಗನಾಥ ಬೆಟ್ಟದ ಬಂಡೆಂಯೊಂದರ ಮೇಲೆ ಸೂಕ್ಷ್ಮ ಶಿಲಾಯುಗದ ವರ್ಣ ಚಿತ್ರಗಳಿರುವುದನ್ನು ಕಾಣಬಹುದು.

**ಸಿಡಿಲಪಡಿ:** ಇದು ಬಾದಾಮಿಯಿಂದ 4 ಕಿ.ಮೀ. ದೂರದಲ್ಲಿದೆ. ಇದೊಂದು ನೈಸರ್ಗಿಕ ಶಿಲಾಗುಹೆಯಂತಿರುವ ಸಿಡಿಲಪಡಿ. ಒಂದು ಮಹತ್ವದ ಪ್ರಾಗೈತಿಹಾಸಿಕ ನೆಲೆಯಾಗಿರುತ್ತದೆ. ಈ ಸಿಡಿಲಪಡಿಯು ಶಿಲಾ ಯುಗದ ಕಾಲದಿಂದಲೂ ಮನುಷ್ಯನ ನಿತ್ಯ ನಡೆಯುವ ದೈನಂದಿನ ಚಟುವಟಿಕೆಯ ಸ್ಥಳವಾಗಿತ್ತು. ಬಾದಾಮಿಯ ಮೊದಲ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತು. ನಂತರ ಶಾತವಾಹನರ ಪಾಲಾಯಿತು. ಶಾತವಾಹನರ ಸಾಂಸ್ಕೃತಿಕ ಅವಶೇಶಗಳಾದ ಇಟ್ಟಿಗೆಗಳು, ಮಣ್ಣಿನ ಪಾತ್ರೆಗಳು, ಚೂರುಗಳು ಮತ್ತು ನಾಣ್ಯಗಳು ಕೂಡಾ ಸಿಕ್ಕಿರುತ್ತವೆ.

**ಮೇಣ ಬಸದಿಗಳು:** ಅಖಂಡವಾದ ಬಂಡೆಯನ್ನು ಕೊರೆದು ನಿರ್ಮಿಸಲಾದ ಕಲ್ಮನೆಗಳಾಗಿವೆ. ಬಾದಾಮಿಯಲ್ಲಿ ನಾಲ್ಕು ಗುಹಾಂತರ ದೇವಾಲಯಗಳಿದ್ದು ಅವೆಲ್ಲಾ ಉತ್ತರಾಭಿಮುಖಿಗಳಾಗಿವೆ. ರೂಢಿಯಲ್ಲಿ ಮೇಣ ಬಸದಿಗಳೆಂದು ಕರೆಯಲಾಗುತ್ತಿದೆ.

Scanned with CamScanner